**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ 112/2019
ಸಿಡಬ್ಲೂ-1
ಪಿ.ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಜಯಶ್ರಿ ರಾಠೋಡ |
| ಗಂಡನ ಹೆಸರು ಃ | | ಸುಭಾಶ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | ಃ | ಗಡಿಸೋಮನಾಳ ತಾಂಡಾ |

(ದಿಃ17/08/2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಸುಮಾರು 5-6 ವರ್ಷಗಳ ಹಿಂದೆ ನನ್ನ ಮಗಳು ಆರೋಪಿತರ ಜೊತೆಗೆ ದುಡಿಯಲೆಂದು ಬೆಂಗಳೂರಿಗೆ ಹೋಗಿದ್ದರು. ಆಗ 1 ನೇ ಆರೋಪಿ ನನ್ನ ಮಗಳನ್ನು ಮದುವೆ ಮಾಡಿಕೊಳ್ಳುತ್ತೇನೆ ಅಂತಾ ಹೇಳಿರುತ್ತಾನೆ. 1 ನೇ ಆರೋಪಿತನ ತಂದೆ ತಾಯಿ ಸದರಿ ಮದುವೆಗೆ ವಿರೋಧ ವ್ಯಕ್ತಪಡಿಸಿರುತ್ತಾರೆ. ಆಗ 1 ನೇ ಆರೋಪಿತನ ತಾಯಿ ನಿಮ್ಮ ಮಗಳು ನನ್ನ ಮಗನನ್ನು ಮದುವೆಯಾದರೆ ನಿಮ್ಮನ್ನು ಸಾಯಿಸಿ ಬಿಡುತ್ತೇವೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ನಮ್ಮ ಗ್ರಾಮದಲ್ಲೆಲ್ಲಾ ಬೈದಾಡಿಕೊಂಡಿರುತ್ತಾರೆ. ಸದರಿ ವಿಷಯ ತಿಳಿದು ನನ್ನ ಮಗಳು (ಚಾಸಾ 4) ಆರೋಪಿತರ ಮನೆಗೆ ಹೋಗಿದ್ದು, ಆಗ ಗ್ರಾಮದ ಹಿರಿಯರು ಪಂಚಾಯತಿ ಮಾಡಿದಾಗ ಚಾಸಾ 4 ಇವಳು ಇಷ್ಟು ದಿನ ನನ್ನನ್ನು ಮದುವೆಯಾಗುತ್ತೇನೆ ಅಂತಾ ಏಕೆ ಹೇಳುವಿರಿ ಎಂದು ಆರೋಪಿತರನ್ನು ಪ್ರಶ್ನಿಸಿರುತ್ತಾಳೆ. ಆಗ ನಮ್ಮ ಗ್ರಾಮದ ಹಿರಿಯರು ಚಾಸಾ 4 ರವರಿಗೆ ನಿನ್ನನ್ನು 1 ನೇ ಆರೋಪಿತನ ಜೊತೆಯೇ ಮದುವೆ ಮಾಡಿಸುತ್ತೇವೆ ಅಂತಾ ತಿಳಿ ಹೇಳಿದ ನಂತರ 1 ನೇ ಆರೋಪಿತ ನಾನು ನಿನ್ನನ್ನು ಮದುವೆಯಾಗುವುದಿಲ್ಲ, ಏನು ಮಾಡಿಕೊಳ್ಳುತ್ತಿಯಾ ಮಾಡಿಕೋ ಅಂತಾ ಬೈದಾಗ ನನ್ನ

ಮಗಳು ಹತ್ತಿ ಬೆಳೆಗೆ ಹೊಡೆಯುವ ಔಷಧವನ್ನು ಕುಡಿದಿರುತ್ತಾಳೆ. ಆಗ ಚಾಸಾ 5 ರವರು ನನಗೆ ಪೋನ ಮಾಡಿ ಚಾಸಾ 4 ಔಷಧ ಕುಡಿದಿರುವ ವಿಷಯ ತಿಳಿಸಿದಾಗ, ಚಾಸಾ 4 ರವರನ್ನು ಚಿಕಿತ್ಸೆಗಾಗಿ ತಾಳಿಕೋಟಿ ಸರ್ಕಾರಿ ಆಸ್ಪತ್ರೆಗೆ 108 ವಾಹನದಲ್ಲಿ ಕರೆದುಕೊಂಡು ಬಂದಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ 4 ರವರನ್ನು ವಿಜಯಪುರದ ಭಾಗ್ಯವಂತಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಆರೋಪಿತರ ವಿರುದ್ಧ ತಾಳಿಕೋಟಿ ಪೋಲಿಸ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿಯು ದೂರಿನಲ್ಲಿರುವ ತನ್ನ ಹೆಬ್ಬಟ್ಟಿನ ಸಹಿಯನ್ನು ಗುರುತನ್ನು ನೋಡಿ ಗುರ್ತಿಸಿದ್ದು, ದೂರನ್ನು ನಿಪಿ: 1 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸ ಸ ಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು**)**

**ಪಾಟೀ ಸವಾಲುಃ ಸ ಸ ಅ ಅವರಿಂದ**

ದಿಃ 2.10.2018 ರಂದು ನಾನು ದೂರನ್ನು ದಾಖಲಿಸಿದ ನಂತರ, ದಿಃ 3.10.2018 ರಂದು ಪೋಲಿಸರು ನಾನು ಜಾಗ ತೋರಿಸಿದ ಮೇರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆ ಜರುಗಿಸಿ ಒಂದು ಪೋಟೋ ತೆಗೆದಿರುತ್ತಾರೆ. ಸಾಕ್ಷಿಯು ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರ್ತಿಸಿದ್ದು, ಪೋಟೋವನ್ನು ನಿಪಿ 2 ಎಂದು ಗುರ್ತಿಸಲಾಯಿತು.

**ಪಾಟಿ ಸವಾಲು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ನೀಡಲಾಯಿತು.**

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.